ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈ ದಿವಸ ಅವರಿಗೆ ಕೊಡುತ್ತಿರುವ ವಿಚಾರಕ್ಕೂ, ಈ ಕೆಲಸಕ್ಕೂ ಸಂಬಂಧವಿಲ್ಲ. ಪಟೇಲ್-ಶಾನುಭೋಗರುಗಳಿಗೆ ಕಮಿಷ್ ಕೊಡುತ್ತಿರುವಂತೆ ಈ ತೋಟಿ-ತಳಾರಿಗಳಿಗೂ ಕಮಿಷ್ ಕೊಡಲು ತಮಗೇನು ಕಷ್ಟವಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲಿ. ಈ ವಿಚಾರವನ್ನು ಮತ್ತೊಮ್ಮೆ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ತಾವು ವಸೂಲ್ಮಾಡಿರತಕ್ಕ ಮೊಬಲಗಿನಲ್ಲಿ ಅನರೆಷ್ಟು, ಬಡ್ಡಿ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅನಲು ಮೊಬಲಗಿಗಿಂತಲೂ ಬಡ್ಡಿಯೇ ಜಾಸ್ತಿ ಆಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆ.

Sri P. M. SWAMIDURAI.—With regard to clause (*c*), will the Government be pleased to change the designation of Thotis and Thalaris ?

Mr. SPEAKER.—This question is about remuneration only.

ಶ್ರೀ ಬಿ. ರಾಚಯ್ಯ.—ಕನ್ನಂಬಾಡಿ ಕಟ್ಟೆ ಕಟ್ಟಿ ಎಷ್ಟೋ ವರ್ಷಗಳಾಯಿತು. ಆದಾಗ್ಯೂ ಹೀಗೆ 13-14 ಲಕ್ಷ ರೂಪಾಯಿಗಳ ಬಾಕಿ ನಿಲ್ಲಲು ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ವರ್ಷಗಳಿಂದಲೂ ಅದು ಹಾಗೇ ಉಳಿಯುತ್ತಾ ಬಂತು. ಅದಕ್ಕಾಗಿ ಆ ಬಾಕಿ ಏರಿಕೊಂಡಿದೆ.

ಶ್ರೀ ಬಿ. ರಾಚಯ್ಯ.—ಈಗಲಾದರೂ ಆ ಇಲಾಖೆಯ ಅಧಿಕಾರಿಗಳು ನೂಕ್ ಕಾರ್ಯಕ್ರಮಗಳನ್ನೆಲ್ಲಾ ಎಂದರೆ, ಜಪ್ತಿ, ಹರಾಜ್ ಇತ್ಯಾದಿಗಳ ಮೂಲಕ ಬಾಕಿ ವಸೂಲು ಮಾಡಲು ಪ್ರಯತ್ನಪಡುತ್ತಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಅವುಗಳನ್ನು ಜಾರಿಗೆ ಕೊಡಲಾಗುತ್ತಿದೆ.

ಶ್ರೀ ಬಿ. ರಾಚಯ್ಯ.—ಈಗ ಬಾಕಿ ನಿಂತಿರುವ ಕಾಂಟ್ರಿಬ್ಯೂಷ್ ಮೊಬಲಗನ್ನು ಕಡ್ಡಾಯವಾಗಿ ವಸೂಲ್ಮಾಡಲು ಪ್ರಯತ್ನ ಮಾಡುತ್ತಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಿದ್ದೇವೆ. ಇದಕ್ಕಾಗಿ ಒಂದು ಸ್ಪೆಷಲ್ ಸಬ್-ಡಿವಿಜನ್ನನ್ನೇ ತೆರೆಯಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ದಿವಸ ಅಲ್ಲಿ ವಸೂಲ್ಮಾಡಿರತಕ್ಕ ಬಾಕಿಗಳ ಬಗ್ಗೆ ಲೆಕ್ಕವೇ ಸರಿಯಾಗಿ ಮೊಕಾಬಲೆಯಾಗದೆ ಯಾರ್ಯಾರು ಎಷ್ಟೆಷ್ಟು ಬಾಕಿ ಕೊಟ್ಟಿದ್ದಾರೆ, ಇನ್ನು ಕೊಡಬೇಕಾದ ಬಾಕಿ ಎಷ್ಟು ಎಂಬ ಬಗ್ಗೆ ಹಾಲ ಲೆಕ್ಕ ನವುಜಾಯಿಷೆ ಇಲ್ಲದೆ ಇರುವುದರಿಂದ ತಾನೆ ಹೀಗೆ ಬಾಕಿ ನಿಲ್ಲಲು ಅವಕಾಶವಾದದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಪ್ರಸಂಗಗಳೂ ಕೆಲವಿವೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡ.—ಈ ಸ್ಪೆಷಲ್ ಸಿಬ್ಬಂದಿಗಾಗಿ ತಾವು ಖರ್ಚು ಮಾಡುತ್ತಿರುವ ಹಣ ಎಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಎರಡು ಸಬ್-ಡಿವಿಜನ್‌ಗಳಿವೆ. ಆ ವಿಚಾರ ಕರಾರುವಾಕ್ಕಾಗಿ ಗೊತ್ತಿಲ್ಲ. ವಿಚಾರ ಮಾಡಿ ಹೇಳುತ್ತೇನೆ.

Gomal of Yaraganahalli and Yanagumba Villages, Chamarajanagar Taluk.

Q.—541. Sri U. M. MADAPPA (Chamarajanagar).—

Will the Government be pleased to state :—

(*a*) whether it has come to their notice that the gomal of Yaraganahalli and Yanagumba villages in Chamarajanagar Taluk is not sufficient for the cattle of these villages ;

(*b*) whether it is true that the gomal is not sufficient because the forest authorities of Bandipur have encroached upon the gomal land of these villages ;

(*c*) whether they have received any representations in the matter from the raiyats ;

(*d*) if so, the action taken by the Government in the matter ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) There is no encroachment. A forest has been constituted as per Forest Manual.

(*c*) No.

(*d*) Does not arise in view of answer to (*c*).

ಶ್ರೀ ಯು. ಎಂ. ಮಾದಪ್ಪ.—15, 16 ಮತ್ತು 17ನೆಯ ನರ್ವೆನಂಬರುಗಳ ಜಮೀನುಗಳಲ್ಲರತಕ್ಕ ಗೋಮಾಳ ಪ್ರದೇಶದಲ್ಲಿ ಹುಲ್ಲುಬನ್ನಿ, ಖೇತ್‌ವಾರು ಮತ್ತು ನಕಾಶೆ ಇತ್ಯಾದಿಗಳೆಲ್ಲಾ ಸೇರಿದ್ದಾಗ್ಯೂ ಆ ಪ್ರದೇಶವನ್ನು ಅರಣ್ಯ ಇಲಾಖೆಯವರು ಹೇಗೆ ಅನುಭವಿಸುತ್ತಿದ್ದಾರೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಒತ್ತುವರಿ ವಿಚಾರ ಕೇಳಿದ್ದೀರಿ. ಹಾಗೆ ಒತ್ತುವರಿ ಆಗಿಲ್ಲ ಎಂದು ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—(c) ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಅನೇಕರು ಅರ್ಜಿ ಕೊಟ್ಟಿದ್ದಾರೆ, ಅವನ್ನು ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿನುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ನರ್ವೇ ನಂಬರ್ 18ರಲ್ಲಿ 25 ಎಕರೆ ಜಮೀನನ್ನು ಅವರು ಆಕ್ರಮಿಸಿ ಕೊಂಡಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮಗೆ ಬಂದಿರುವ ವರದಿಯಲ್ಲಿ ಒತ್ತುವರಿ ಮಾಡಿಲ್ಲ ಎಂದು ತಿಳಿಸಿದೆ.

ಶ್ರೀ ಯು. ಎಂ. ಮಾದಪ್ಪ.—ಗುಂಡ್ಲುಪೇಟೆ ಮತ್ತು ಈ ತಾಲ್ಲೂಕಿನ ಜನರೂ ಕಳೆದ ದನರಾಧಿವೇಶನ ದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಈ ವಿಚಾರದಲ್ಲಿ ರೆಪ್ರಸೆಂಟೇಷನ್ ಕೊಟ್ಟಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

Medical College, Mysore (Teaching Staff).

Q.—293. **Sri V. M. MASCARENHAS** (St. John's Hill).—

Will the Government be pleased to state :—

(*a*) the names of the Professors, Assistant Professors and Lecturers in the Medical College, Mysore and their qualifications ;

(*b*) their salaries and/or allowances ;

(*c*) their service in the College ?

A.—**Sri A. G. RAMACHANDRA RAO** (Minister for Law and Education).—

(*a*) to (*c*) A statement furnishing the information is appended below.